***ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 03.02.2026***

***<u>ಪಾಟೀ ಸವಾಲುಃ 1 ನೇ ಎದುರುದಾರರ ಪರ ವಕೀಲರಿಂದಃ</u>***

*1. ಅರ್ಜಿ ಮತ್ತು ವಕಾಲತ್ ನಲ್ಲಿರುವ ಸಹಿ ನಿಮ್ಮದಲ್ಲ ಎಂದರೆ ಸರಿ. ಅರ್ಜಿ ಮತ್ತು ವಕಾಲತ್ ನ್ನು ಸಂದೀಪ್ ಎಂಬುವವರು ಅಧಿಕಾರ ಪತ್ರ ಪಡೆದವರು ಸಲ್ಲಿಸಿರುತ್ತಾರೆ ಎಂದು ಹೇಳುತ್ತಾರೆ. ಅರ್ಜಿಯಲ್ಲಿ ಅಧಿಕಾರ ಪತ್ರ ಪಡೆದವರು ಎಂದು ನಮೂದು ಮಾಡಿಲ್ಲ ಎಂದರೆ ಸರಿ. ಸಂದೀಪ್ ರವರು ಈಗ ವಿಚಾರಣೆಗೆ ಒಳಪಟ್ಟಿಲ್ಲ ಎಂದರೆ ಸಾಕ್ಷಿ ಪ್ರಸ್ತುತ ನಾನು ವ್ಯವಸ್ಥಾಪರಿಯಾಗಿರುವುದರಿಂದ ಸಂದೀಪ್ ವಿಚಾರಣೆಗೆ ಒಳಪಟ್ಟಿಲ್ಲವೆಂದು ಹೇಳುತ್ತಾರೆ. ಸಂದೀಪ್ ಮತ್ತು ನೀವು ಯಾವ ಅಧಿಕಾರದ ನೆಲೆಯಲ್ಲಿ ಈ ಅರ್ಜಿ ಸಲ್ಲಿಸಿರುತ್ತೀರಾ ಎಂದು ದಾಖಲೆ ನೀಡಿಲ್ಲ ಎಂದರೆ ಸರಿ. ಎಂವಿಳಿಸಿ.231/2009 ರಲ್ಲಿ ನಿಮಗೆ ನೋಟೀಸು ಜಾರಿಯಾಗಿದೆ ಎಂದರೆ ಸರಿ ಸಾಕ್ಷಿ ಸಾಕ್ಷಿ ಆಫೀಸ್ ಬಾಯ್ ಪಪಿಡೆದುಕೊಂಡು ಸಂಬಂಧಪಟ್ಟ ಮ್ಯಾನೇಜರ್ ರವರ ಗಮನಕ್ಕೆ ತಂದಿಲ್ಲವೆಂದು ಹೆಳುೀತ್ತಾರೆ. ನಿಮ್ಮ ಪ್ರಮಾಣಪತ್ರ ಮತ್ತು ಅರ್ಜಿಯಲ್ಲಿ ಆಫೀಸ್ ಬಾಯ್ ತೆಗೆದುಕೊಂಡಿದ್ದರು ಎಂದು ಬರೆಸಿಲ್ಲ ಎಂದರೆ ಸರಿ. ಅರ್ಜಿದಾರರ ಕಂಪನಿ ದೇಶದ್ಯಾತ್ಯಂತ ಶಾಖೆಗಳನ್ನು ಹೊಂದಿ ಪ್ರಖ್ಯಾತಿ ಇದೆ ಎಂದರೆ ಸರಿ. ನಿಮ್ಮ ಕಂಪನಿಗೆ ಸಂಬಂಧಿಸಿದಂತೆ ಪ್ರತ್ಯೇಕ ತನಿಖಾ ತಂಡ ಇದೆ ಎಂದರೆ ಸರಿ. ಯಾವುದೇ ನೋಟೀಸು ನ್ಯಾಯಾಲಯಗಳಿಂದ*

ಬಂದರೆ ಅದನ್ನು ನಿಮ್ಮ ವಿಶೇಷ ತನಿಖಾ ತಂಡಕ್ಕೆ ತನಿಖೆಗಾಗಿ ಕಳಹಿಸಿಕೊಡುತ್ತೀರಾ ಎಂದರೆ ಸರಿ.

2. ಎಂವಿಸಿ.231/2009 ರಲ್ಲಿ ತನಿಖೆ ಮಾಡಿಸಿರುವ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ನೊಟೀಸು ಕಳೆದು ಹೋಗಿರುವುದರಿಂದ ನಮ್ಮ ಕಚೇರಿಯ ಕಂಪ್ಯೂಟರಿನಲ್ಲಿ ನೋಂದಣಿ ಮಾಡಿಕೊಂಡಿಲ್ಲವೆಂದು ಹೇಳುತ್ತಾರೆ. ಆಫೀಸ್ ಬಾಯ್ ಎಂವಿಸಿ.231/2009 ರ ನೋಟೀಸ್ ತೆಗೆದುಕೊಂಡಿರುವ ಬಗ್ಗೆ ಹಾಗೂ ಅದನ್ನು ವ್ಯವಸ್ಥಾಪಕರಿಗೆ ತಿಳಿಸದೇ ಕಳೆದಿರುವ ಬಗ್ಗೆ ನಿಮ್ಮ ಕಚೇರಿಯಲ್ಲಿ ಆಂತರಿಕಾ ತನಿಖೆ ನಡೆಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಎಂವಿಸಿ.231/2009 ರಲ್ಲಿ ನೋಟೀಸು ನಿಮ್ಮ ಕಚೇರಿಗೆ ಜಾರಿಯಾಗಿದ್ದರು ಆಫೀಸ್ ಬಾಯ್ ತೆಗೆದುಕೊಂಡು ಕಳೆದಿದ್ದಾರೆಂದು ಸುಳ್ಳು ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ. ನೀಮಗೆ 2009 ರಲ್ಲಿ ಎಂವಿಸಿ.231/2009 ರ ಮಾಹಿತಿ ಇದ್ದರು ಯಾವುದೇ ಸಕಾರಣಗಳನ್ನು ಕೊಡದೇ ಸುಳ್ಳು ಅರ್ಜಿ ಸಲ್ಲಿಸಿರುತ್ತೀರಾ ಎಂದರೆ ಸರಿಯಲ್ಲ. ನೀವು ಪರಿಹಾರ ಕೊಡಬೇಕಾಗುತ್ತದೆ ಎಂದು ಯಾವುದೇ ಅಧಿಕಾರ ಇಲ್ಲದೆ ಇದ್ದರೂ ಸಹ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ.

3. ಕೆಎ-11/ಎಸ್-4243 ವಾಹನ ನಿಮ್ಮ ಕಂಪನಿಯಲ್ಲಿ ವಿಮೆಗೆ ಒಳಪಟ್ಟಿಲ್ಲ ಎನ್ನುವ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ಎಂವಿಸಿ.231/2009 ಹಾಗೂ ಜಾರಿ ಅರ್ಜಿ ಸಂಃ 40/2020 ರಲ್ಲಿ ನೋಟೀಸುಗಳು ನಿಮಗೆ ಜಾರಿಯಾಗಿವೆ ಎಂದರೆ ಸರಿಯಲ್ಲ. ನೊಂದ ವ್ಯಕ್ತಿಗೆ ರೂ.18 ಸಾವಿರ ಪರಿಹಾರದ ಹಣ ಕೊಡದೇ 2009 ರಿಂದ ಇಲ್ಲಿಯವರೆಗೂ ಒಂದಲ್ಲ ಒಂದು ಕಾರಣ ಹೇಳಿಕೊಂಡು ಸತಾಯಿಸುತ್ತೀರುತ್ತೀರಾ ಎಂದರೆ ಸರಿಯಲ್ಲ. ನಿಮ್ಮ ಅರ್ಜಿಯಲ್ಲಿ ಹೇಳಿರುವ ಸಂಗತಿಗಳು ವಸ್ತುಸ್ಥಿತಿಗೆ ವಿರುದ್ಧವಾಗಿವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.***

**ಓ ಹೇ ಕೇ ಸ ಇ ಒ**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.**